# PRESS MEET
# 11TH MAY 2022







ಮೈಸೂರು ಜಿಲ್ಲಾ ಪತ್ರಕರ್ತರ ಸಂಘ
ಮೈಸೂರು
ಮೈಸೂರು ಜಿಲ್ಲಾ ಪತ್ರಕರ್ತರ ಸಂಘ
VIDYAVARDHAKA SANGHA(R).


ಮೈಸೂರು ಜಿಲ್ಲಾ ಪತ್ರಕರ್ತರ ಸಂಘ
ಮೈಸೂರು


ಮೈಸೂರು ಜಿಲ್ಲಾ ಪತ್ರಕರ್ತರ ಸಂಘ
ಮೈಸೂರು ಜಿಲ್ಲಾ ಪತ್ರಕರ್ತರ ಸಂಘ
VIDYAVARDHAKA SANGHA(R).

# PRESS NOTE

The Vidyavardhaka First Grade College, PG Centre,Mysuru, Vidyavardhaka Research Foundation and IQAC in collaboration with University Industry Interaction Centre (UIIC), University of Mysore, Mysuru is organizing a One Day National Level Conference on the topic **"Digital Trends and Technologies in Commerce and Management: Issues and Challenges"** on 14th May, 2022 (Saturday).

## About the Conference

The world we live in today is not the world we were born into. In these past few years, technology has changed the way we interact, the way we conduct business, the way we shop and the way we live and work. Technology has become an integral part of our routine and now forms an indispensable part of life. The incredible pace at which digitization has transformed the business world is remarkable. The dependency on the internet is increasing at breakneck speed and 'cloud' now has the ability to offer digital power at lower costs and this is changing the profile of entire Commerce, Management, Corporates, Banking, Education, Insurance etc., everyone is relying on emerging technologies to improve their competitive advantages and drive strategy and growth. Ably handling information systems will help various sectors streamline their administrative operations, reduce operation costs, innovate, enter new markets, improve customer service and create competitive advantages for themselves in the market.

Education sector is no exception, as the millennial generation has grown up around technology. The landscape of education needs to be continuously evolving to ensure that this tech-savvy generation remains engaged in the learning process. Digital transformation in the global higher education sector determines the future roadmap to a sustainable education management strategy.

Tasks that earlier seemed to be unimaginable are now being undertaken by digital technologies. Keeping in view, the changes and transformation required for higher education field particularly in Commerce and Management, there is need for deliberations on the issues

and challenges with regard to technologies in higher education. Hence, the Department of Studies in Commerce of Vidyavardhaka First Grade College, PG Centre, Vidyavardhaka Research Foundation and IQAC in collaboration with University Industry Interaction Centre (UIIC), University of Mysore, Mysuru is taking an initiative to providing a platform to deliberate on the issues and challenges concerned with '**Digital Trends and Technologies in Commerce and Management: Issues and Challenges'** through conducting One Day National Level Conference.

.

**Objectives of the Conference**

- To have a critical purview of issues and challenges associated with digital trends and technologies in Commerce and Management.
- To shed a light on the various economic advantages of digital transformation.
- To provide a platform for Academicians, Research Scholars, Professionals and Students to deliberate on the intricacies of digital trends and technologies.

**Sub-themes**

- Digital Economy and Fiscal discipline
- Digitalization of Business
- Digital Literacy
- Digital University
- Digital Accounting
- Digital empowerment for inclusive growth
- Innovation in Digital Learning
- Digital Finance and Currency
- Digital Banking reforms
- Digital Industry
- Digitalization in Education
- Digital Technologies and Culture

The conference will be inaugurated on Saturday, 14th May, 2022 at 9.30 am in Sri P.M. Chikkaboraiah Hall by Prof. G. Hemantha Kumar, Vice Chancellor, University of Mysore, Mysuru. Sri Gundappa Gowda, Hon'ble President, Vidyavardhaka Sangha, Mysuru, Er. P. Vishwanath, Hon'ble Secretary, Sri. Srishaila Rammannavar, Hon'ble Treasurer will be chief guests. Sri T. Nagaraju, Chairman, CMC, Dr.S. MariGowda, Principal of the college, Dr. B. Mahadevappa, Professor & Director, UIIC, Mysuru and Dr. Rajeshwari G.M., HOD, PG Department of Commerce, VVFGC, Mysuru will be present in the function. After the inauguration the Key Note address will be delivered by Sri. Madhav Bissa, Programme Director of Data Science & AI, NASSCOM.

After the Key Note address, the Technical Session-1 will be held from 11.30 am to 1:00 pm on the topic **"Digital Technology Industry 4.0",** Prof. Suresha, DOS in Computer Science, UOM, Manasagangothri, Mysuru will be the Chairperson and Sri Dinesh K. Panigrahi, Regional Lead, SSC, NASSCOM will be the Resource Person.

The Technical Session-2 will be held at 2:00 pm to 3:30 pm on the topic **"How Digital Transformation is Changing the way we do business?",** Prof. H. Rajashekar, Dean, DOS in Commerce, UOM, Manasagangothri, Mysuru will be the Chairperson and Dr. Dharma Prasad, CEO and Chief Scientist, Prosetta Bioconforamatics Pvt. Ltd., Mysuru will be the Resource Person.

Paper presentation sessions will begin at 3:45 pm, Dr. K. Nagendra Babu, Professor and BOS Chairman, DOS in Commerce, UOM, Manasagangothri, Mysuru and Dr. M. Kumar Swamy, Professor and Chairman, DOS in Commerce, UOM, Manasagangothri, Mysuru will be the Chairperson. Around 50 selected research papers will be presented in the sessions.

In the Conference nearly 150 to 200 delegates like Professors, Research Scholars, Entrepreneurs and students are expected to participate.

OOD facility is arranged for all the teachers attending the conference.

**ವಿದ್ಯಾವರ್ಧಕ ಸಂಘ(ರಿ), ಮೈಸೂರು**
**ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು**
**ಶೇಷಾದ್ರಿ ಐಯ್ಯರ್ ರಸ್ತೆ, ಮೈಸೂರು**

**ಪ್ರಕಟಣೆಯ ಕೃಪೆಗಾಗಿ**

"ವಾಣಿಜ್ಯ ಮತ್ತು ನಿರ್ವಹಣೆಯಲ್ಲಿ ಡಿಜಿಟಲ್ ಪ್ರವೃತ್ತಿಗಳು ಮತ್ತು ತಂತ್ರಜ್ಞಾನಗಳು: ಸಮಸ್ಯೆಗಳು ಮತ್ತು ಸವಾಲುಗಳು" ಎಂಬ ವಿಷಯದ ಕುರಿತು ಒಂದು ದಿನದ ರಾಷ್ಟ್ರೀಯ ಮಟ್ಟದ ಸಮ್ಮೇಳನ

ಮೈಸೂರಿನ ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು, ಸ್ನಾತಕೋತ್ತರ ಕೇಂದ್ರ, ವಿದ್ಯಾವರ್ಧಕ ಸಂಶೋಧನ ಪ್ರತಿಷ್ಠಾನ ಮತ್ತು ಐಕ್ಯೂಎಸಿ ವಿಭಾಗಗಳು, ಮೈಸೂರು ವಿಶ್ವವಿದ್ಯಾನಿಲಯ ಇಂಡಸ್ಟ್ರಿ ಇಂಟರಾಕ್ಷನ್ ಸೆಂಟರ್ (ಯುಐಐಸಿ) ಸಹಯೋಗದಲ್ಲಿ 14ನೇ ಮೇ 2022ರ ಶನಿವಾರದಂದು "ವಾಣಿಜ್ಯ ಮತ್ತು ನಿರ್ವಹಣೆಯಲ್ಲಿ ಡಿಜಿಟಲ್ ಪ್ರವೃತ್ತಿಗಳು ಮತ್ತು ತಂತ್ರಜ್ಞಾನಗಳು : ಸಮಸ್ಯೆಗಳು ಮತ್ತು ಸವಾಲುಗಳು" ಎಂಬ ವಿಷಯದ ಕುರಿತು ಒಂದು ದಿನದ ರಾಷ್ಟ್ರೀಯ ಮಟ್ಟದ ಸಮ್ಮೇಳನವನ್ನು ಆಯೋಜಿಸುತ್ತಿದೆ.

**ಸಮ್ಮೇಳನದ ಬಗ್ಗೆ**

ಇಂದು ನಾವು ಬದುಕುತ್ತಿರುವ ಜಗತ್ತು ನಾವು ಹುಟ್ಟಿದ ಜಗತ್ತಲ್ಲ. ಇತ್ತೀಚಿನ ಕೆಲವು ವರ್ಷಗಳಲ್ಲಿ ತಂತ್ರಜ್ಞಾನವು ನಾವು ಸಂವಹನ ನಡೆಸುವ ವಿಧಾನ, ವ್ಯಾಪಾರ ನಡೆಸುವ ವಿಧಾನ, ಶಾಪಿಂಗ್ ಮಾಡುವ ವಿಧಾನ, ವಾಸಿಸುವ ಮತ್ತು ಕೆಲಸ ಮಾಡುವ ವಿಧಾನವನ್ನು ಬದಲಾಯಿಸಿದೆ. ತಂತ್ರಜ್ಞಾನವು ನಮ್ಮ ದಿನಚರಿಯ ಅವಿಭಾಜ್ಯ ಅಂಗವಾಗಿದೆ ಮತ್ತು ಜೀವನದ ಅನಿವಾರ್ಯ ಭಾಗವಾಗಿದೆ. ಡಿಜಿಟಲೀಕರಣವು ವ್ಯಾಪಾರ ಜಗತ್ತನ್ನು ಪರಿವರ್ತಿಸುವ ವೇಗ ನಂಬಲಾಗುತ್ತಿಲ್ಲ ಮತ್ತು ಗಮನಾರ್ಹವಾಗಿದೆ. ಅಂತರ್ಜಾಲದ ಮೇಲಿನ ಅವಲಂಬನೆಯು ಅತಿ ವೇಗದಲ್ಲಿ ಹೆಚ್ಚುತ್ತಿದೆ ಮತ್ತು 'ಕ್ಲೌಡ್' ಕಂಪ್ಯೂಟಿಂಗ್ ಈಗ ಕಡಿಮೆ ವೆಚ್ಚದಲ್ಲಿ ಡಿಜಿಟಲ್ ಶಕ್ತಿಯನ್ನು ನೀಡುವ ಸಾಮರ್ಥ್ಯವನ್ನು ಹೊಂದಿದೆ ಮತ್ತು ಇದು ಸಂಪೂರ್ಣ ವಾಣಿಜ್ಯ, ನಿರ್ವಹಣೆ, ಕಾರ್ಪೊರೇಟ್‌ಗಳು, ಬ್ಯಾಂಕಿಂಗ್, ಶಿಕ್ಷಣ, ವಿಮೆ ಇತ್ಯಾದಿಗಳ ಸ್ವರೂಪವನ್ನು ಬದಲಾಯಿಸುತ್ತಿದೆ. ಪ್ರತಿಯೊಬ್ಬರೂ ತಮ್ಮ ಸ್ಪರ್ಧಾತ್ಮಕ ಅನುಕೂಲಗಳನ್ನು ಸುಧಾರಿಸಲು ಅಂತರ್ಜಾಲದ ಬೆಳವಣಿಗೆಯನ್ನು ಹೆಚ್ಚಿಸಲು ಉದಯೋನ್ಮುಖ ತಂತ್ರಜ್ಞಾನಗಳ ಮೇಲೆ ಅವಲಂಬಿಸಿದ್ದಾರೆ. ಕಾರ್ಯಾಚರಣೆಯ ವೆಚ್ಚವನ್ನು ಕಡಿಮೆ ಮಾಡಲು, ಹೊಸ ಮಾರುಕಟ್ಟೆಗಳನ್ನು ಪ್ರವೇಶಿಸಲು, ಗ್ರಾಹಕ ಸೇವೆಯನ್ನು ಸುಧಾರಿಸಲು ಮತ್ತು ಮಾರುಕಟ್ಟೆಯಲ್ಲಿ ಸ್ಪರ್ಧಾತ್ಮಕ ಪ್ರಯೋಜನಗಳನ್ನು ಸೃಷ್ಟಿಸಲು ಡಿಜಿಟಲ್ ಟೆಕ್ನಾಲಜಿಯು ವಿವಿಧ ಮಾಹಿತಿ ವ್ಯವಸ್ಥೆಗಳನ್ನು ಸಮರ್ಪಕವಾಗಿ ನಿಭಾಯಿಸಲು ಮತ್ತು ಆಡಳಿತಾತ್ಮಕ ಕಾರ್ಯಾಚರಣೆಗಳನ್ನು ಸುಗಮಗೊಳಿಸಲು ಹಾಗೂ ವೆಚ್ಚವನ್ನು ಕಡಿಮೆ ಮಾಡಲು ಅಲ್ಲದೇ ಹೊಸ ಮಾರುಕಟ್ಟೆಗಳನ್ನು ಪ್ರವೇಶಿಸಲು, ಗ್ರಾಹಕ ಸೇವೆ ಸುಧಾರಿಸಲು ಮತ್ತು ಮಾರುಕಟ್ಟೆಯನ್ನು ಸೃಷ್ಟಿಸಲು ಗಮನಾರ್ಹವಾದ ಸೇವೆಯಾಗಿರುತ್ತದೆ. ಶಿಕ್ಷಣ ಕ್ಷೇತ್ರವು ಸಹ ಡಿಜಿಟಲ್ ತಾಂತ್ರಿಕತೆಯಿಂದ ಹೊರತಾಗಿಲ್ಲ.

ಹೊಸಪೀಳಿಗೆಯ ವಿದ್ಯಾರ್ಥಿಗಳು ತಂತ್ರಜ್ಞಾನದಿಂದ ಕೂಡಿದ ಬುದ್ಧಿವಂತ ಪೀಳಿಗೆಯಾಗಿರುತ್ತದೆ ಹಾಗೂ ಇವರುಗಳ ಕಲಿಕೆಯ ಪ್ರಕ್ರಿಯೆಯೂ ಸಹ ನಿರಂತರವಾಗಿ ತಂತ್ರಜ್ಞಾನದಿಂದ ಕೂಡಿದ್ದು ತನ್ಮೂಲಕ ಜ್ಞಾನ ವಿಕಸನಕ್ಕೆ

ತೆರೆದುಕೊಳ್ಳುತ್ತಿದೆ. ಜಾಗತಿಕ ಉನ್ನತ ಶಿಕ್ಷಣ ಕ್ಷೇತ್ರದಲ್ಲಿ ಡಿಜಿಟಲ್ ರೂಪಾಂತರವು ಸುಸ್ಥಿರ ಶಿಕ್ಷಣ ನಿರ್ವಹಣಾ ಕಾರ್ಯತಂತ್ರಕ್ಕೆ ಭವಿಷ್ಯದ ಮಾರ್ಗಸೂಚಿಯನ್ನು ನಿರ್ಧರಿಸುತ್ತದೆ.

ಈ ಹಿಂದೆ ಊಹಿಸಲೂ ಅಸಾಧ್ಯವೆನಿಸಿದ ಕಾರ್ಯಗಳನ್ನು ಈಗ ಡಿಜಿಟಲ್ ತಂತ್ರಜ್ಞಾನಗಳು ಸುಲಭೀಕರಿಸಿದೆ. ಉನ್ನತ ಶಿಕ್ಷಣ ಕ್ಷೇತ್ರದಲ್ಲಿ ವಿಶೇಷವಾಗಿ ವಾಣಿಜ್ಯ ಮತ್ತು ನಿರ್ವಹಣೆಯಲ್ಲಿ ಅಗತ್ಯವಿರುವ ಬದಲಾವಣೆಗಳು ಮತ್ತು ರೂಪಾಂತರಗಳನ್ನು ಗಮನದಲ್ಲಿಟ್ಟುಕೊಂಡು ತಂತ್ರಜ್ಞಾನಗಳಿಗೆ ಸಂಬಂಧಿಸಿದಂತೆ ಸಮಸ್ಯೆಗಳು ಮತ್ತು ಸವಾಲುಗಳ ಕುರಿತು ಚರ್ಚೆಗಳ ಅಗತ್ಯವಿದೆ. ಆದ್ದರಿಂದ, ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜಿನ ವಾಣಿಜ್ಯ ಶಾಸ್ತ್ರ ಸ್ನಾತಕೋತ್ತರ ಅಧ್ಯಯನ ವಿಭಾಗ, ವಿದ್ಯಾವರ್ಧಕ ಸಂಶೋಧನಾ ಪ್ರತಿಷ್ಠಾನ ಮತ್ತು ಐಕ್ಯೂಎಸಿ ವಿಭಾಗಗಳು, ಮೈಸೂರು ವಿಶ್ವವಿದ್ಯಾನಿಲಯ ಇಂಡಸ್ಟ್ರಿ ಇಂಟರಾಕ್ಷನ್ ಸೆಂಟರ್ (ಯುಐಐಸಿ) ಸಹಯೋಗದೊಂದಿಗೆ ಈ ಬಗ್ಗೆ ಚರ್ಚಿಸಲು ವೇದಿಕೆಯನ್ನು ಸೃಷ್ಟಿಸುವ ನಿಟ್ಟಿನಲ್ಲಿ ಒಂದು ದಿನದ ರಾಷ್ಟ್ರೀಯ ಮಟ್ಟದ ಸಮ್ಮೇಳನವನ್ನು 'ವಾಣಿಜ್ಯ ಮತ್ತು ನಿರ್ವಹಣೆಯಲ್ಲಿ ಡಿಜಿಟಲ್ ಟ್ರೆಂಡ್‌ಗಳು ಮತ್ತು ತಂತ್ರಜ್ಞಾನಗಳು: ಸಮಸ್ಯೆಗಳು ಮತ್ತು ಸವಾಲುಗಳು' ಶೀರ್ಷಿಕೆಯಡಿಯಲ್ಲಿ ಹಮ್ಮಿಕೊಳ್ಳಲಾಗಿದೆ.

**ಸಮ್ಮೇಳನದ ಉದ್ದೇಶಗಳು**

- ವಾಣಿಜ್ಯ ಮತ್ತು ನಿರ್ವಹಣೆಯಲ್ಲಿ ಡಿಜಿಟಲ್ ಪ್ರವೃತ್ತಿಗಳು ಮತ್ತು ತಂತ್ರಜ್ಞಾನಗಳಿಗೆ ಸಂಬಂಧಿಸಿದ ಸಮಸ್ಯೆಗಳು ಮತ್ತು ಸವಾಲುಗಳ ನಿರ್ಣಾಯಕ ವ್ಯಾಪ್ತಿಯನ್ನು ಹೊಂದಲು.
- ಡಿಜಿಟಲ್ ರೂಪಾಂತರದ ವಿವಿಧ ಆರ್ಥಿಕ ಅನುಕೂಲಗಳ ಮೇಲೆ ಬೆಳಕು ಚೆಲ್ಲಲು.
- ಶಿಕ್ಷಣ ತಜ್ಞರು, ಸಂಶೋಧಕರು, ವೃತ್ತಿಪರರು ಮತ್ತು ವಿದ್ಯಾರ್ಥಿಗಳಿಗೆ ಡಿಜಿಟಲ್ ಟ್ರೆಂಡ್‌ಗಳು ಮತ್ತು ತಂತ್ರಜ್ಞಾನಗಳ ಜಟಿಲತೆಗಳ ಕುರಿತು ಚರ್ಚಿಸಲು ವೇದಿಕೆಯನ್ನು ಒದಗಿಸುವುದು.

**ಉಪವಿಷಯಗಳು**

- ಡಿಜಿಟಲ್ ಆರ್ಥಿಕತೆ ಮತ್ತು ಹಣಕಾಸಿನ ಶಿಸ್ತು
- ವ್ಯಾಪಾರದ ಡಿಜಿಟಲೀಕರಣ
- ಡಿಜಿಟಲ್ ಸಾಕ್ಷರತೆ
- ಡಿಜಿಟಲ್ ವಿಶ್ವವಿದ್ಯಾಲಯ
- ಡಿಜಿಟಲ್ ಅಕೌಂಟಿಂಗ್
- ಅಂತರ್ಗತ ಬೆಳವಣಿಗೆಗೆ ಡಿಜಿಟಲ್ ಸಬಲೀಕರಣ
- ಡಿಜಿಟಲ್ ಕಲಿಕೆಯಲ್ಲಿ ನಾವೀನ್ಯತೆ
- ಡಿಜಿಟಲ್ ಹಣಕಾಸು ಮತ್ತು ಕರೆನ್ಸಿ
- ಡಿಜಿಟಲ್ ಬ್ಯಾಂಕಿಂಗ್ ಸುಧಾರಣೆಗಳು
- ಡಿಜಿಟಲ್ ಇಂಡಸ್ಟ್ರಿ
- ಶಿಕ್ಷಣದಲ್ಲಿ ಡಿಜಿಟಲೀಕರಣ
- ಡಿಜಿಟಲ್ ತಂತ್ರಜ್ಞಾನಗಳು ಮತ್ತು ಸಂಸ್ಕೃತಿ

ದಿನಾಂಕ:೧೪.೦೫.೨೦೨೨ರ ಬೆಳಿಗ್ಗೆ ೯.೩೦ ಗಂಟೆಗೆ ಸಮ್ಮೇಳನವನ್ನು ಕಾಲೇಜಿನ ಶ್ರೀ.ಪಿ.ಎಂ.ಚಿಕ್ಕಬೋರಯ್ಯ ಸಭಾಂಗಣದಲ್ಲಿ ಉದ್ಘಾಟಿಸಲಾಗುವುದು. ಪ್ರೊ.ಜಿ.ಹೇಮಂತಕುಮಾರ್, ಕುಲಪತಿಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಅವರು ಸಮ್ಮೇಳನವನ್ನು ಉದ್ಘಾಟಿಸುವರು. ಶ್ರೀ.ಗುಂಡಪ್ಪ ಗೌಡ, ಗೌರವ ಅಧ್ಯಕ್ಷರು, ವಿದ್ಯಾವರ್ಧಕ ಸಂಘ, ಮೈಸೂರು ಇವರು ಅಧ್ಯಕ್ಷತೆಯನ್ನು ವಹಿಸುವರು. ವಿದ್ಯಾವರ್ಧಕ ಸಂಘದ ಕಾರ್ಯದರ್ಶಿಯವರಾದ ಶ್ರೀ.ಪಿ.ವಿಶ್ವನಾಥ್, ಕೋಶಾಧ್ಯಕ್ಷರಾದ ಶ್ರೀಶೈಲರಾಮಣ್ಣನವರ್ ಮತ್ತು ಕಾಲೇಜು ನಿರ್ವಹಣಾ ಮಂಡಳಿಯ ಅಧ್ಯಕ್ಷರಾದ ಶ್ರೀ ಟಿ.ನಾಗರಾಜು, ಮುಖ್ಯಅತಿಥಿಗಳಾಗಿ ಆಗಮಿಸುವರು. ಕಾಲೇಜಿನ ಪ್ರಾಂಶುಪಾಲ ಡಾ.ಎಸ್.ಮರೀಗೌಡ, ಮೈಸೂರು ವಿಶ್ವವಿದ್ಯಾನಿಲಯ ಇಂಡಸ್ಟ್ರಿ ಇಂಟರಾಕ್ಷನ್ ಸೆಂಟರ್ (ಯುಐಐಸಿ), ನಿರ್ದೇಶಕರಾದ ಪ್ರೊ..ಬಿ.ಮಹದೇವಪ್ಪ ಮತ್ತು ಸ್ನಾತಕೋತ್ತರ ವಿಭಾಗದ ಮುಖ್ಯಸ್ಥರಾದ ಡಾ.ರಾಜೇಶ್ವರಿ ಜಿ.ಎಂ., ಅವರುಗಳು ಸಮಾರಂಭದಲ್ಲಿ ಉಪಸ್ಥಿತರಿರುವರು.

ಉದ್ಘಾಟನೆಯ ನಂತರ ಶ್ರೀ.ಮಾಧವ್ ಬಿಸ್ವಾ, ಕಾರ್ಯಕ್ರಮ ನಿರ್ದೇಶಕರು, ಡಾಟಾ ಸೈನ್ಸ್ ಮತ್ತು ಕೃತಿಕ ಬುದ್ಧಿಮತೆ, ಓಂಖಿಱಅಔಒ., ಬೆಂಗಳೂರು, ಅವರು ದಿಕ್ಸೂಚಿ ಭಾಷಣವನ್ನು ನೆರವೇರಿಸಿಕೊಡುವರು.

ಬೆಳಿಗ್ಗೆ 11.30 ರಿಂದ ಮಧ್ಯಾಹ್ನ 1:00 ರವರೆಗೆ "ಡಿಜಿಟಲ್ ಟೆಕ್ನಾಲಜಿ ಇಂಡಸ್ಟ್ರಿ 4.0" ವಿಷಯದ ಕುರಿತು ತಾಂತ್ರಿಕ ಅಧಿವೇಶನ–೧ ನಡೆಯಲಿದ್ದು , ಈ ಅಧಿವೇಶನವು ಮೈಸೂರು ವಿಶ್ವವಿದ್ಯಾನಿಲಯದ ಗಣಕಯಂತ್ರ ವಿಜ್ಞಾನ ಅಧ್ಯಯನ ವಿಭಾಗದ ಪ್ರಾಧ್ಯಾಪ ಕರಾದ ಪ್ರೊ. ಸುರೇಶ್ ಅವರ ಅಧ್ಯಕ್ಷತೆಯಲ್ಲಿ ಜರುಗಲಿದೆ. ಬೆಂಗಳೂರಿನ ಓಂಖಿಱಅಔಒ ನ ಪ್ರಾದೇಶಿಕ ಲೀಡ್ ಆದಂತಹ ಶ್ರೀ ದಿನೇಶ್ ಕೆ. ಪಾಣಿಗ್ರಾಹಿ, ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಲಿದ್ದಾರೆ.

ಮಧ್ಯಾಹ್ನ ೨.೦೦ ರಿಂದ ೩.೩೦ರವರೆಗೆ "ನಾವು ವ್ಯವಹಾರ ಮಾಡುವ ವಿಧಾನವನ್ನು ಡಿಜಿಟಲ್ ರೂಪಾಂತರವು ಹೇಗೆ ಬದಲಾಯಿಸುತ್ತಿದೆ?" ಎಂಬ ವಿಷಯದ ಕುರಿತು ತಾಂತ್ರಿಕ ಅಧಿವೇಶನ–೨ ನಡೆಯಲಿದ್ದು, ಈ ಅಧಿವೇಶನವನ್ನು ಪ್ರೊ.ಹೆಚ್.ರಾಜಶೇಖರ್, ಪ್ರಾಧ್ಯಾಪಕರು ಹಾಗೂ ಡೀನ್, ವಾಣಿಜ್ಯಶಾಸ್ತ್ರ ಅಧ್ಯಯನ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ ಅವರ ಅಧ್ಯಕ್ಷತೆಯಲ್ಲಿ ಜರುಗಲಿದೆ. ಡಾ. ಧರ್ಮ ಪ್ರಸಾದ್, ಅಇಔ ಮತ್ತು ಮುಖ್ಯ ವಿಜ್ಞಾನಿ, ಪ್ರೊಸೆಟ್ಟಾ ಬಯೋಕಾನ್ಫೊರಾಮ್ಯಾಟಿಕ್ಸ್ ಪ್ರೈ. ಲಿಮಿಟೆಡ್, ಮೈಸೂರು ಸಂಪನ್ಮೂಲ ವ್ಯಕ್ತಿಗಳಾಗಿರುತ್ತಾರೆ.

ಸಂಶೋಧನಾ ಪ್ರಬಂಧಗಳ ಮಂಡನೆ ಅಧಿವೇಶನವು ಮಧ್ಯಾಹ್ನ 3:45ಕ್ಕೆ ಪ್ರಾರಂಭವಾಗುತ್ತವೆ, ಡಾ.ಕೆ.ನಾಗೇಂದ್ರ ಬಾಬು, ಪ್ರೊಫೆಸರ್ ಮತ್ತು ವಾಣಿಜ್ಯಶಾಸ್ತ್ರ ಅಧ್ಯಯನ ಮಂಡಳಿಯ ಅಧ್ಯಕ್ಷರು, ಮಾನಸಗಂಗೋತ್ರಿ, ಮೈಸೂರು ಮತ್ತು ಡಾ. ಎಂ. ಕುಮಾರ್ ಸ್ವಾಮಿ, ಅಧ್ಯಕ್ಷರು, ವಾಣಿಜ್ಯಶಾಸ್ತ್ರ ಅಧ್ಯಯನ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ ಅವರು ನಿರ್ವಹಿಸುವರು. ಈ ಅಧಿವೇಶನದಲ್ಲಿ ಸುಮಾರು ೫೦ ಆಯ್ದ ಸಂಶೋಧನಾ ಪ್ರಬಂಧಗಳನ್ನು ಮಂಡಿಸಲು ಅವಕಾಶ ನೀಡಲಾಗುವುದು.

ಸಮ್ಮೇಳನದಲ್ಲಿ ಪ್ರಾಧ್ಯಾಪಕರು, ಸಂಶೋಧಕರು, ಉದ್ಯಮಿಗಳು ಮತ್ತು ವಿದ್ಯಾರ್ಥಿಗಳು ಸೇರಿ ಸುಮಾರು ೧೫೦ ರಿಂದ ೨೦೦ ಪ್ರತಿನಿಧಿಗಳು ಭಾಗವಹಿಸುವ ನಿರೀಕ್ಷೆಯಿದೆ. ಸಮ್ಮೇಳನದಲ್ಲಿ ಭಾಗವಹಿಸುವ ಅಧ್ಯಾಪಕರುಗಳಿಗೆ ಔಔಆ ಸೌಲಭ್ಯವಿರುತ್ತದೆ.

ಪ್ರಾಂಶುಪಾಲರು